1997-98 ಆರ್ಥಿಕ ವರ್ಷ ಮುಕ್ತಾಯವಾದ ನಂತರ ಗುರಿಯನ್ನು ಮುಟ್ಟಿದ ಬಗ್ಗೆ ತಿಳಿಯುತ್ತದೆ.

ಇ) ಇಲ್ಲ. ಹೆಚ್ಚಿನ ಮೊತ್ತವನ್ನು ಸಂಗ್ರಹಿಸುವ ಸಲುವಾಗಿ ವಿವಿಧ ಆಕರ್ಷಕ ಪ್ರೋತ್ಸಾಹ ಯೋಜನೆಗಳನ್ನು ಜಾರಿಗೆ ತರಲಾಗಿದೆ.

10.30 ಪಿ.ಎಂ

ಡಾ॥ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ 1995-96, 1996-97ರಲ್ಲಿ ಸಣ್ಣ ಉಳಿತಾಯದಿಂದ ಸಂಗ್ರಹವಾಗಿರತಕ್ಕಂಥ ಮೊತ್ತ ಎಷ್ಟು? ಎರಡನೆಯದು 1996-97ನೇ ಸಾಲಿನಲ್ಲಿ ನಿವ್ವಳ ಸಂಗ್ರಹ ಗುರಿ 720 ಕೋಟಿ ರೂಪಾಯಿಗಳು ಇದ್ದದ್ದನ್ನು 550 ಕೋಟಿ ರೂಪಾಯಿಗಳಿಗೆ ಏಕೆ ಇಳಿಸಿದ್ದೀರಿ? ಮೂರನೆಯದು ಗುರಿ ಮಟ್ಟದೇ ಇರಲು ಕಾರಣ ಏನು? ಸರ್ಕಾರಿ ಅಧಿಕಾರಿಗಳ ಅಸಡ್ಡೆಯೇ ಇದಕ್ಕೆ ಕಾರಣ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ 1995-96ನೇ ಸಾಲಿನಲ್ಲಿ ಮತ್ತ 1996-97ನೇ ಸಾಲಿನಲ್ಲಿ ಗುರಿ ಮುಟ್ಟಿಲ್ಲ. 1995-96 ಮತ್ತು 1996-97ನೇ ಸಾಲಿನಲ್ಲಿ 720 ಕೋಟಿ ರೂಪಾಯಿಗಳು ನಿವ್ವಳ ಇತ್ತು. ಆದರೆ ಶೇಖರಣೆ ಆದದ್ದು 1995-96ರಲ್ಲಿ 473.70 ಕೋಟಿ ರೂಪಾಯಿಗಳು. 1996-97ನೇ ಸಾಲಿನಲ್ಲಿ 491.21 ಕೋಟಿ ರೂಪಾಯಿಗಳು. ಸುಮಾರು 68 ಪರ್ಸೆಂಟ್ ಆಗಿದೆ. ಇದಕ್ಕೆ ಕಾರಣ ಏನೆಂದರೆ ಕೇಂದ್ರ ಸರ್ಕಾರದವರು 1-4-95 ರಿಂದ ಡಿಪಾಜಿಟ್ ಇಡುತ್ತಿದ್ದದ್ದನ್ನು ನಿಲ್ಲಿಸಿಬಿಟ್ಟರು. ಆ ಕಾರಣದಿಂದ ನಮಗೆ ಡಿಪಾಜಿಟ್ ಇಡುವುದು ಕಡಿಮೆ ಆಯಿತು. ಮತ್ತು ಈಗ ಮೂರು ಕಡೆಗಳಲ್ಲಿ ಪೈಪೋಟಿ ಜಾಸ್ತಿಯಾಗಿದೆ. ಬ್ಯಾಂಕ್‌ಗಳು, ಕೃಷ್ಣಾ ಜಲಭಾಗ್ಯ ನಿಗಮದಲ್ಲಿ 19 ಪರ್ಸೆಂಟ್ ಬಡ್ಡಿ ಕೊಡುತ್ತಿದ್ದೇವೆ. ಇಲ್ಲಿ 17 ಪರ್ಸೆಂಟ್ ಬಡ್ಡಿ ಮಾತ್ರ ಕೊಡುತ್ತೇವೆ. ಎಲ್ಲಿ ಹೆಚ್ಚು ಬಡ್ಡಿ ಕೊಡುತ್ತಾರೋ ಅಲ್ಲಿ ಹಣ ಇಡಲಿಕ್ಕೆ ಜನ ಹೋಗುತ್ತಾರೆ. ಆ ಕಾರಣದಿಂದ ಕಡಿಮೆ ಆಗಿದೆ. ಆದರೂ ಸಹ ಈ ವರ್ಷದಿಂದ ನಾವು ಈಗ ಪ್ರೋತ್ಸಾಹ ಧನಹೆಚ್ಚು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೋಸ್ಕರ ನಾವು ಈ ವರ್ಷ 550 ಕೋಟಿ ರೂಪಾಯಿಗಳ ಗುರಿ ಇಟ್ಟಿದ್ದೇವೆ. ಆ ಗುರಿಯನ್ನು ನಾವು 1997-98ನೇ ಸಾಲಿನಲ್ಲಿ ತಲುಪುವ ಉದ್ದೇಶ ಇಟ್ಟುಕೊಂಡಿದ್ದೇವೆ.

ಲಾಲ್‌ಬಾಗ್‌ನಲ್ಲಿ ಮತ್ಸ್ಯಾಲಯ

307 - ಶ್ರೀರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮೀನುಗಾರಿಕೆ ಮತ್ತು ಒಂದು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಇಲಾಖೆಯು ಲಾಲ್‌ಬಾಗ್‌ನಲ್ಲಿ ಮತ್ಸ್ಯಾಲಯವನ್ನು ಯಾವಾಗ ಪ್ರಾರಂಭಿಸಿತು?

ಆ) ಈ ಮತ್ಸ್ಯಾಲಯಕ್ಕೆ ನಿಗಧಿ ಪಡಿಸಿದ ಪ್ರವೇಶ ಶುಲ್ಕ ಎಷ್ಟು?

ಇ) 1997ನೇ ಜನವರಿಯಿಂದ ಜೂನ್1997ರ ವರೆಗೆ ಇದರಿಂದ ಬಂದ ವರಮಾನವೆಷ್ಟು?

ಈ) ಲಾಲ್‌ಬಾಗ್ ಉದ್ಯಾನವನಕ್ಕೆ ಪ್ರವೇಶ ಶುಲ್ಕ ಇಲ್ಲದೇ ಇರುವುದರರಿಂದ ಈ ಉದ್ಯಾನವನದೊಳಗೆ ಇರತಕ್ಕ ಮತ್ಸ್ಯಾಲಯಕ್ಕೆ ಪ್ರವೇಶ ಶುಲ್ಕ ವಿಧಿಸಿರುವುದನ್ನು ಸರ್ಕಾರವು ರದ್ದುಪಡಿಸುವುದೇ?

ಉ) ಈ ಮತ್ಸ್ಯಾಲಯಕ್ಕೆ ಪ್ರವೇಶ ಶುಲ್ಕ ವಸೂಲಿ ಮಾಡಲು ಇರತಕ್ಕ ಸಿಬ್ಬಂದಿ ಎಷ್ಟು ಹಾಗೂ ಅವರಿಗೆ ಸರಾಸರಿ ವರ್ಷಕ್ಕೆ ವೆಚ್ಚ ಮಾಡುತ್ತಿರುವ ಮೊತ್ತ ಎಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ದಿನಾಂಕ 10-9-87 ರಂದು ಪ್ರಾರಂಭಿಸಲಾಯಿತು.

ಆ) 5 ವರ್ಷದ ಒಳಗಿನವರಿಗೆ ರೂ. 1-00, 5 ವರ್ಷದ ಮೇಲ್ಪಟ್ಟವರಿಗೆ ಪ್ರತಿಯೊಬ್ಬರಿಗೆ ರೂ 2-00 ಶೈಕ್ಷಣಿಕ ಉದ್ದೇಶದಿಂದ ಬರುವ ಶಾಲಾ ಮಕ್ಕಳಿಗೆ ಪ್ರವೇಶ ಉಚಿತ.

ಇ) ರೂ. 1,59,594-00 ಗಳು

ಈ) ಇಲ್ಲ.

ಉ) ಈ ಮತ್ಸ್ಯಾಲಯದಲ್ಲಿ ಇರತಕ್ಕ ಸಿಬ್ಬಂದಿಗಳ ವಿವರಗಳು :

		ಸಿಬ್ಬಂದಿ ಸಂಖ್ಯೆ
1)	ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು	1
2)	ಮೀನುಗಾರಿಕೆ ಕ್ಷೇತ್ರ ಪಾಲಕರು	2
		3

ಮೇಲ್ಕಂಡ ಸಿಬ್ಬಂದಿಗಳವರಿಗೆ ತಗಲುವ ವಾರ್ಷಿಕ ಸರಾಸರಿ ವೆಚ್ಚ ರೂ.1,16,000-00ಗಳು

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಮಾನ್ಯ ಉಪ ಮುಖ್ಯಮಂತ್ರಿಗಳು ಬಹುಜನ ಸಮಾಜ ಪಾರ್ಟಿಗೆ ಹೋಗುತ್ತಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಆದರೆ, ಅವರು ಇಲ್ಲಿಯೇ ಇದ್ದಾರೆ.

ಶ್ರೀ ಎಂ. ಸಿದ್ದರಾಮಯ್ಯ : ನಾನು ಜನತಾ ದಳದಲ್ಲಿಯೇ ಇದ್ದೇನೆ. ನಾವು ಅಲ್ಲಿ ಇದ್ದು ಕೊಂಡೇ ನಿಮ್ಮನ್ನು ಸೋಲಿಸುತ್ತೇವೆ.

ಅಧ್ಯಕ್ಷರು : ಅವರು ಸ್ಮಾಲ್ ಸೇವಿಂಗ್ಸ್ ವಿಷಯಕೋಸ್ಕರವೇ ಹೋಗಿದ್ದರು.

ಶ್ರೀರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ 1987ರಿಂದ ನಮ್ಮ ಲಾಲ್‌ಬಾಗ್‌ನಲಿ ಒಂದು ಮತ್ಸ್ಯಾಲಯ ಇದೆ. ಈ ಮತ್ಸ್ಯಾಲಯವನ್ನು ನಿಮ್ಮ ಇಲಾಖೆಯಿಂದ ನೋಡಿಕೊಳ್ಳುತ್ತಿದ್ದಾರೆ. ಅಲ್ಲಿ ವಿವಿಧ ಜಾತಿಯ ಮೀನುಗಳು ಬಹಳ ಕಡಿಮೆ ಇವೆ. ಅದಕ್ಕೆ ಒಂದು ವರ್ಷದಲ್ಲಿ 1 ಲಕ್ಷ 59 ಸಾವಿರ ರೂಪಾಯಿಗಳು ಮಾತ್ರ ಅಲ್ಲಿ ಕಲೆಕ್ಟ್ ಆಗಿದೆ. ಅಲ್ಲಿ ವಿವಿಧ ಜಾತಿಯ ಮೀನುಗಳನ್ನು ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಮತ್ಸ್ಯಾಲಯಗಳನ್ನು ಗ್ಲಾಸಸ್‌ನಲ್ಲಿ ಮಾಡಿದ್ದಾರೆ. ಅದನ್ನು ಏರ್‌ಪೋರ್ಟ್ಸ್, ರೈಲ್ವೆ ಸ್ಟೇಷನ್ಸ್,ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಇಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಈಗಾಗಲೇ ಏರ್‌ಪೋರ್ಟ್ಸ್ ಮತ್ತು ರೈಲ್ವೆ ಸ್ಟೇಷನ್ಸ್‌ಗೆ ಸಣ್ಣ ಸಣ್ಣ ಮತ್ಸ್ಯಾಲಯಗಳನ್ನು ಕೊಟ್ಟಿದ್ದೇವೆ. ಮತ್ತು ಮಂಗಳೂರು ಏರ್‌ಪೋರ್ಟ್‌ಗೆ ಒಂದನ್ನು ಕೊಡಲಿಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಲಾಲ್‌ಬಾಗ್‌ನಲ್ಲಿ ಎಂಟ್ರಿ ಫೀ ಇಟ್ಟಿಲ್ಲ. ಇದನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಕಬ್ಬನ್ ಪಾರ್ಕ್‌ನಲ್ಲಿ ಸಹ ಎಂಟ್ರಿ ಫೀ ಇಲ್ಲ. ಆದರೆ ಬಾಲಭವನ, ವೆಂಕಟಪ್ಪ ಗ್ಯಾಲರಿಯಲ್ಲಿ ಎಂಟ್ರಿ ಫೀ ಇದೆ. ಇದನ್ನು ಮನ್ನಾ ಮಾಡಿದರೆ ಮೈನ್‌ಟೈನ್ ಮಾಡುವುದಕ್ಕೆ ತೊಂದರೆಯಾಗುತ್ತದೆ. 5 ವರ್ಷದ ಕೆಳಗಿನವರಿಗೆ 1 ರೂಪಾಯಿ 5 ವರ್ಷದ ಮೇಲಿನವರಿಗೆ 2 ರೂಪಾಯಿ ಎಂಟ್ರಿ ಫೀ ಇಟ್ಟಿದ್ದೇವೆ. ಮತ್ತು ಶೈಕ್ಷಣಿಕ ಪ್ರವಾಸ ಬಂದವರಿಗೆ ಉಚಿತ ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ಮನ್ನಾ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಬೇರೆ ಬೇರೆ ಜಾತಿಯ ಮೀನುಗಳನ್ನು ಇಡಲು ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಬಾಂಬೆಯಲ್ಲಿರುವ ತಾರಾಪುರೇ ಮತ್ಸ್ಯಾಲಯದ ಹಾಗೆ ಎಲ್ಲಿಯಾದರೂ ಒಂದು ಕಡೆ ಜಾಗ ತೆಗೆದುಕೊಂಡು ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಅಧಿಕಾರಿಗಳಿಗೆ ಆದೇಶ ನೀಡಿದ್ದೇನೆ. ಈಗ ಇರುವುದು ನನಗೆ ಸರಿ ಬರಲಿಲ್ಲ ಆದ್ದರಿಂದ ಅದರ ಡಿಜೈನ್ ಬದಲಾವಣೆ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ರಾಮಲಿಂಗಾರೆಡ್ಡಿ : ಅದು ಬಹಳ ಚಿಕ್ಕ ಜಾಗ ಸುಮಾರು 40-50 ವರ್ಷಗಳಿಂದ ಲಾಲ್‌ಬಾಗ್‌ನವರೇ ಮೆಂಟೈನ್ ಮಾಡುತ್ತಿದ್ದರು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಲಾಲ್‌ಬಾಗ್‌ನಲ್ಲಿರುವುದು ದಿವಂಗತ ನಂಜಪ್ಪನವರು ಕಟ್ಟಿಸಿದ ಕಟ್ಟಡ ಅದನ್ನು ಕೆಡುವುದಕ್ಕೆ ಅವರು ಅವಕಾಶ ಕೊಡುವುದಿಲ್ಲ. ಆದ್ದರಿಂದ ಇದಿದ್ದರಲ್ಲೇ ಯಾವರೀತಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೋ ಆ ರೀತಿ ಮಾಡುತ್ತೇವೆ.